ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೨೬ನೇ ಜೂನ್ ೧೯೯೦, ಆಷಾಢ ೫, ೧೯೧೨ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯ ಘಂಟೆ ೪೦ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ನಡವಳಿಕೆಯಲ್ಲಿ ತಪ್ಪಾಗಿ ಮುದ್ರಣವಾಗಿರುವುದನ್ನು ಸರಿಪಡಿಸಲು ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಪ್ರೊಸೀಡಿಂಗ್ಸ್ ಬಗ್ಗೆ ಸನ್ಮಾನ್ಯ ವಿರೋಧಪಕ್ಷದ ನಾಯಕರು ನಾನೇನೋ ಹೇಳಿದೆ ಎಂದು ಹೇಳಿ ಆದು ಈ ಡಿಬೇಟ್‌ನ ಆಧಿಕೃತ ವರದಿಯಲ್ಲಿ ೫ನೇ ಸೆಷನ್ ವಾಲ್ಯೂಂ ೧೧ನ್ನು ಉದ್ಧರಿಸಿ ಕೆಲವು ಮಾತುಗಳನ್ನು ಹೇಳಿದರು. ನಾನು ತಕ್ಷಣ ಅದಕ್ಕೆ ಪ್ರತಿಕ್ರಿಯೆ ಕೊಟ್ಟೆ. ಏನೆಂದರೆ ಅಂಥದ್ದು ಹೇಳಿಲ್ಲ ಎಂದು. Then the original record was brought and this is dated 5-10-1988 Part-II. ಆ ಹೇಳಿಕೆ ಆ ತರಹ ಇಲ್ಲ. ಪ್ರಿಂಟಿಂಗ್ ಮಿಸ್ಟೇಕ್ ಆಯಿತು ಎಂದು ಹೇಳಿ ಒಂದೂವರೆ ಘಂಟೆಯೊಳಗೆ ಈ ಸದನಕ್ಕೆ ಒರಿಜಿನಲ್ ರೆಕಾರ್ಡ್ ಒಪ್ಪಿಸಿ ತಮ್ಮ ಅವಗಾಹನೆಗೆ ತಂದಿದ್ದೇನೆ. ಈ ಬಗ್ಗೆ ಒಂದು ಪತ್ರವನ್ನು ಕೂಡ ನಾನು ತಮಗೆ ಕಳುಹಿಸಿದ್ದೇನೆ. ಪ್ರಿಂಟೆಡ್ ವಾಲ್ಯೂಂ ಏನಿದೆ, ಅದನ್ನು ಸರಿ ಮಾಡಬೇಕು ಎಂದು. I brought it to the notice of the Hon'ble Speaker and this House, immediately, I think, within an hour, the original record was illustrated by me and Inspite of it a particular section of the press mentioned that.—

> "Mr. Moily tried to wriggle out of the situation by stating that a major mistake crept into official records."

without quoting the submission made by me immediately with reference to the original record, they tried to give some wrong information. This is some sort of ironical. I don't think this is an honest reporting as far as the debates of this House is concerned. Not only this but in future also. When it is immediately brought to the notice for correction, it should be noted and I think it will be fair to the person who has spoken and also fair to the House to bring correct picture in the press so that nobody will mistake about it.

Sri D. B. Chandre Gowda (Leader of Opposition).—The basic question is this. The Chair should guide us. Sir, you should guide all of us. ಪ್ರಿಂಟೆಡ್ ಡಾಕ್ಯುಮೆಂಟ್ ಸರಿಯೋ ಅಥವಾ ಒರಿಜಿನಲ್ ಡಾಕ್ಯುಮೆಂಟ್ ಸರಿಯೋ ವಿಷಯವು ನನಗೆ ಗೊತ್ತಿಲ್ಲ. ಈ ದಾಖಲೆ ಆಲ್ಲಿ ನಮೂದಾಗಿರುತ್ತದೆ. ಈ ದಾಖಲೆಯ ಪ್ರತಿಗಳನ್ನು ಎಲ್ಲಾ ಸದಸ್ಯರಿಗೆ ಸರಿಪಡಿಸುವುದಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ. ಇದು ಅಚ್ಚಾದ ಪ್ರತಿಯ

ಆಜ್ಞಾಗಿರತಕ್ಕ ಪ್ರತಿಯಲ್ಲಿ ಮೇಲುಗಡೆ ಹಾಕಿರುತ್ತಾರೆ "UNCORRECTED NOT FOR PUBLICATION" ಎಂದು. ಅಂದರೆ "UNCORRECTED NOT FOR PUBLICATION" ಸರಿಯೋ "CORRECTED AND PRINTED" ಸರಿಯೋ ಎಂಬುದು ಪ್ರಶ್ನೆ, Corrected and Printed ತಪ್ಪು ಎಂದು ಹೇಳುವುದಕ್ಕೆ ಇದ್ದಂಥ ಅವಕಾಶವನ್ನು ಮಾನ್ಯ ಸದಸ್ಯರುಗಳು ಆಗಲೇ ಸರಿಪಡಿಸಿ ದಾಖಲೆಗಳನ್ನು ಪ್ರಿಂಟಿಗೆ ಹೋಗುವುದಕ್ಕೆ ಮುಂಚೆ ಒದಗಿಸಬೇಕಾಗುತ್ತದೆ. ಆದ್ದರಿಂದ ಪ್ರಿಂಟಿಗೆ ಹೋಗಿರತಕ್ಕ ದಾಖಲೆಗಳಲ್ಲಿ ಈ ಪದ ಇರಂವುದಿಲ್ಲ i.e., Uncorrected not for publication ಎಂದು ಇರುವುದಿಲ್ಲ. ಆದ್ದರಿಂದ ನನ್ನ ಕಂಟೆನ್‌ಷನ್ ಏನೆಂದರೆ ಪ್ರಿಂಟೆಡ್ ದಾಖಲೆ ಕೂಡ Corrected and Certified; not uncorrected publication but it is corrected and certified for publication. Therefore, it is published. I seek the Chair's ruling on this point. The member had not utilised the earlier opportunity given to him or after printing it must have been an after-thought, by the member concerned to correct the document to suit his convenience at this point of time. That is how I feel and I only seek the guidance of the Chair before giving a ruling on this point.

SRI M. VEERAPPA MOILY.—After all, the printed volume, I am not entitled to correct it. What I can correct is only the copy sent by them and I have sent it and in the printed volume, we are not entitled to correct it or send for correction. We know the mistake after it is printed and circulated to us. So, inview of this, I sought the permission of the Chair to cause the correction of this and also to see that, I since have made the submission yesterday itself, my version should have also been carried by the members.

MR. SPEAKER.—Should I look at the original ?

SRI D. B. CHANDRE GOWDA.—This is "Uncorrected not for publication". Whatever it may be, the Hon'ble Law Minister cannot take shelter now calling this as a Original Document.

ಅಧ್ಯಕ್ಷರು.—ಇದನ್ನು ನಾನು ನೋಡಿ, ನಮ್ಮ ಕಛೇರಿಯಲ್ಲಿ ಯಾವ ಪ್ರೊಸೀಜರ್ ಅಡಾಪ್ಟ್ ಮಾಡಿಕೊಂಡಿದ್ದಾರೆ, recording and sending it to the Members for verfication/corrections, I will look into it and then I will take a decision.

ಶ್ರೀ ಎಸ್. ಎಚ್. ಕೌಜಲಗಿ.—ಅಪ್ರೂವಲ್‌ಗಾಗಿ ಕಳುಹಿಸಂತ್ತಾರೆ. ಅಪ್ರೂವಲ್ ಅಂಡ್ ರಿಟರ್ನ್ ಅಂತ ಹೇಳಿ ಕಳುಹಿಸುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕಿಂತ ಮುಂಚಿತವಾಗಿ ತಮ್ಮ ಅನುಮತಿಯನ್ನು ಕೋರಿ ಈ ಟೆಲಿಫೋನ್ ಕದ್ದಾಲಿಕೆ.....

ಅಧ್ಯಕ್ಷರು.—ಇದು ವಿಶೇಷವಾದ ಚರ್ಚೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೂ ಅದರ ಬಗ್ಗೆಯೇ ಮಾತನಾಡುತ್ತೇನೆ. ಬೇರೆ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—I will call you to speak on this.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ನಿನ್ನೆ ಅನಿವಾರ್ಯ ಕಾರಣಗಳಿಂದ ನಾನು ಸಭೆಗೆ ಬರುವುದಕ್ಕಾಗಲಿಲ್ಲ. ಆದರೆ ಇದರ ಬಗ್ಗೆ ಬಂದ ವರದಿಗಳನ್ನು ನೋಡಿದಾಗ ಇವತ್ತು ಸತ್ಯಾಸತ್ಯತೆ ಏನು ಇದೆ, ಆ ಸಂಗತಿಯನ್ನು ಟೇಬಲ್ ಮೇಲೆ ಇಡದೆ ಚರ್ಚೆ ಮಾಡುವಂತಹದ್ದು ತುಂಬಾ ಕಷ್ಟಕರವಾದಂತಹ ವಿಷಯ. ಆದ್ದರಿಂದ ಇದರ ಬಗ್ಗೆ ನಾನು ತಮಗೆ

ಸಲಹೆ ಕೊಡುವುದು ಇಷ್ಟೆ. ಹಿಂದೆ ಈ ರೀತಿಯ ಅನೇಕ ಸಂದರ್ಭಗಳು ಬಂದಾಗ ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸಂಬಂಧಪಟ್ಟ ಫೈಲನ್ನು ನೋಡಿ ಆಮೇಲೆ ಚರ್ಚೆ ಮಾಡಿರತಕ್ಕಂತಹ ಅನೇಕ ಸಂದರ್ಭಗಳು ಉಂಟು. ನಿಜವಾದಂಥ ಚರ್ಚೆಯಾಗಿ ಸತ್ಯ ಹೊರಗಡೆ ಬಂದು ಸಂಬಂಧಪಟ್ಟವರಿಗೆ ಶಿಕ್ಷೆಯಾಗಬೇಕು ನಮ್ಮ ಪರ್‌ಪಸ್ ಸರ್ವ್ ಆಗಬೇಕು ಅಂತ ಇದ್ದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಈ ಸದನದ ಟೇಬಲ್ ಮೇಲೆ ಇಡಬೇಕು. ಸತ್ಯಾಸತ್ಯತೆ ಈ ಸದನಕ್ಕೆ ಗೊತ್ತಾಗಬೇಕು. ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಅದನ್ನು ಬಿಟ್ಟು ಯಾವುದೋ ನಾಲ್ಕು ಗೋಡೆಗಳ ಮಧ್ಯೆದಲ್ಲಿ ಚರ್ಚೆ ಮಾಡುವುದಷ್ಟೇ ಸೀಮಿತವಾದುದಲ್ಲ ಒಂದು ವೇಳೆ ಈ ಸದನದ ಟೇಬಲ್ ಮೇಲೆ ಅದರ ಸಂಪೂರ್ಣವಾದ ಫೈಲನ್ನು ಇಡುವುದಕ್ಕೆ ಕಷ್ಟವಾಗುತ್ತದೆಂದರೆ, ಬೇರೆ ಅನಿವಾರ್ಯ ಕಾರಣಗಳಿಂದ ಸನ್ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸೀಮಿತವಾಗಿ ವಿರೋಧಪಕ್ಷದ ನಾಯಕರುಗಳು ಸನ್ಮಾನ್ಯ ಮುಖ್ಯಮಂತ್ರಿಗಳು ಸಮಕ್ಷವಾದಲ್ಲಿ ಫೈಲನ್ನು ನೋಡಿದ ಮೇಲೆ ಚರ್ಚೆ ಮಾಡಿದರೆ ಅದಕ್ಕೆ ನಿಜವಾದ ಅರ್ಥ ಬರುತ್ತದೆ. ನಿಜಕ್ಕೂ ಇದು ಸಾಕಷ್ಟು ಗಂಭೀರವಾದ ವಿಚಾರ ಏಕೆಂದರೆ ಅನೇಕ ಪ್ರಮುಖರ ಹೆಸರುಗಳು ಪ್ರಸ್ತಾಪವಾಗಿದೆ. ಮೊದಲು ೩೦ ಪ್ರಮುಖರ ಹೆಸರುಗಳಿದ್ದುದು, ಈಗ ೩೦೦ಕ್ಕೆ ಹೋಗಿದೆ. ಹಿಂದೆ ಇದ್ದಂತಹ ಮುಖ್ಯಕಾರ್ಯದರ್ಶಿಗಳು ಹೇಳಿದ ಮಾತಿಗೂ, ಈಗಿನ ಮುಖ್ಯ ಕಾರ್ಯದರ್ಶಿಗಳು ಹೇಳಿದ ಮಾತುಗಳಿಗೂ ವಿವಾದವಿರುವುದರಿಂದ, ದಯಮಾಡಿ ಆ ಫೈಲನ್ನು ತಮ್ಮ ಕೊಠಡಿಯಲ್ಲಿ ನೋಡಿಯಾದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಹೆಚ್ಚು ಉಪಯೋಗವಾಗುತ್ತದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಿನ್ನೆ ೧೮೦ ನಿಮಿಷಗಳ ಕಾಲ ಇದೇ ಪ್ರಶ್ನೆಯ ಮೇಲೆ ಮೂಲಭೂತವಾಗಿ ಚರ್ಚೆ ಮಾಡಿದ್ದಾಯಿತು. ಅದರ ಬಗ್ಗೆ ಈಗಾಗಲೇ ನನ್ನ ರೂಲಿಂಗನ್ನು ಕೊಟ್ಟಿದ್ದೇನೆ. ಈಗ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಂದುವರಿಸುತ್ತಾರೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿಯ ಚರ್ಚೆ

ದೂರವಾಣಿ ಕದ್ದಾಲಿಕೆಯ ಬಗ್ಗೆ

† ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಸಭಾಧ್ಯಕ್ಷರೆ, I will try to quickly sum up the points that I am trying to make out yesterday to connect my thinking on this subject to-day. ಬಹಳ ಮುಖ್ಯವಾಗಿ ಸನ್ಮಾನ್ಯ ಸದಸ್ಯರಾದ ಶ್ರೀ ಪಾಸ್ ಖಿರ್ಗಿಯವರು ವಿವರವಾದ ಚರ್ಚೆಯನ್ನು ಮಾಡುತ್ತಾ ಇಂಡಿಯನ್ ಟೆಲಿಫೋನ್ ಆಕ್ಟ್ ಏನು ಇದೆ, ಇದು ೧೮೫ ವರ್ಷಗಳ ಕಾಲ ಜೀವಂತವಾಗಿ ಉಳಿದುಕೊಂಡು ಬಂದಿರತಕ್ಕ ಮತ್ತು ಅದೊಂದು ಜ್ವಲಂತ ಸಮಸ್ಯೆಯಾಗಿ ರಾಷ್ಟ್ರವ್ಯಾಪಿ ಚರ್ಚೆಯಾಗುತ್ತಿರತಕ್ಕಂತಹ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತಾ ಕೆಲವು ಮಾತುಗಳನ್ನು ಹೇಳಿದ್ದರು. ಅದಕ್ಕೆ ಪೂರ್ವಭಾವಿಯಾಗಿ ನಾನು ಹೇಳಿದೆ.

The Indian Telegraph Act is a Central Act. The State is only an executing machinery While doing so, certain procedures, inbuilt or conventions brought in have been discussed in detail. ಮುಖ್ಯವಾಗಿ ನನ್ನ ನಿನ್ನೆಯ ಭಾಷಣ ಸೆಕ್ಷನ್ (೫) ಸಬ್ ಕ್ಲಾಸ್ (೨) ನಲ್ಲಿ ಹೇಳಿರುವಂತೆ ಒಬ್ಬ ಯಾರು ಅಥಾರಿಟಿಯನ್ನು ನಿಗದಿಯನ್ನು ಮಾಡಬೇಕೋ ಅವರು ನಿಗದಿ ಮಾಡಿದಮೇಲೆ ಟೆಲಿಫೋನ್‌ನ ಕದ್ದಾಲಿಕೆ ಪ್ರಸಂಗದಲ್ಲಿ ಅವರು ಡೀಲಿಂಕ್ ಆಗುತ್ತಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೂ ರಾಜ್ಯದ ಮುಖ್ಯಮಂತ್ರಿ ಅವರು ಈಗಾಗಲೇ ಪಬ್ಲಿಕ್ ಡಾಕ್ಯುಮೆಂಟ್ ಎಂದು ಏನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ೧೯೭೨ ರಿಂದ ಇತ್ತೀಚೆಗೆ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯಗಳನ್ನು ಯಾವ ವರ್ಷಕ್ಕೆ ಸೀಮಿತವಾಗಿ ಎಂದು ಹೇಳದೇ ಒಂದು ಸ್ಪೀಪಿಂಗ್ ರಿಮಾರ್ಕ್ಸ್‌ನ್ನು ಮಾಡಿದ್ದಾರೆ. ಅದು ಇವತ್ತು ಸದನದ ದಾಖಲೆ ಆಗಿರುವುದರಿಂದ, ಅದರ ಬಗ್ಗೆ ವಿಸ್ತಾರವಾದ ಚರ್ಚೆ ಆಗಿದೆ. ಮುಖ್ಯವಾಗಿ ಶ್ರೀ ಪಾಸ್ ಖಿರ್ಗಿಯವರು ೫೬-೬೮ರಲ್ಲಿ ಮುಖ್ಯ ಕಾರ್ಯದರ್ಶಿ ಸತೀಶ್ ಚಂದ್ರ ಅವರು ಮಾಡಿದ ಆಜ್ಞೆ ಆಗಿನ ಮುಖ್ಯಮಂತ್ರಿಗಳ ಆದೇಶದಿಂದಲೇ ಆಗಿತ್ತು ಎನ್ನುವ ಅಭಿಪ್ರಾಯವನ್ನು ಸಭೆಗೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಂಬಂಧದಲ್ಲಿ ಬೆಂಗಳೂರು ಟೆಲಿಫೋನ್ಸ್‌ನ ಜನರಲ್